# ವಿಶೇಷ ದಾಖಲಾತಿ ಆಂದೋಲನ

ಅರ್ಹ ವಯಸ್ಸಿನ ಎಲ್ಲಾ ಮಕ್ಕಳಿಗೂ ಶಾಲಾ ಶಿಕ್ಷಣ ನೀಡುವುದು ಸಾಮಾಜಿಕ ಜವಾಬ್ದಾರಿ. ಅದಕ್ಕಾಗಿ ಭಾರತ ಸರ್ಕಾರ ಸರ್ವಶಿಕ್ಷಣ ಅಭಿಯಾನದ ಮೂಲಕ ಎಲ್ಲಾ ಮಕ್ಕಳನ್ನು ಶಾಲಾ ಶಿಕ್ಷಣದ ಮುಖ್ಯ ವಾಹಿನಿಗೆ ತರುವ ವಿನೂತನ ಪ್ರಯತ್ನಗಳನ್ನು ಮಾಡುತ್ತಿದೆ.

ಅಷ್ಟೇ ಅಲ್ಲ ಹುಟ್ಟಿದ ಪ್ರತಿ ಮಗುವೂ ಶಿಕ್ಷಣ ಪಡೆಯಲು ಹಂಬಲಿಸುತ್ತದೆ. ಆದರೆ ಕುಟುಂಬದ ಬಡತನ, ಪೋಷಕರ ಅಜ್ಞಾನ, ನಿರಾಸಕ್ತಿ, ಶಾಲೆ ದೂರವಿರುವುದು, ಅನಾರೋಗ್ಯ ಇತ್ಯಾದಿ ಕಾರಣಕ್ಕಾಗಿ ಅನಿವಾರ್ಯವಾಗಿ ಮಗು ಶಾಲೆಯಿಂದ ನಿಧಾನವಾಗಿ ದೂರ ಉಳಿಯುತ್ತಾ ಹೋಗುತ್ತದೆ. ಸರ್ವ ಶಿಕ್ಷಣ ಅಭಿಯಾನದ, ವಿಶೇಷ ಹಾಗೂ ಆವಿಷ್ಕೃತ ಕಾರ್ಯತಂತ್ರಗಳಾದ ಟೆಂಟ್ ಶಾಲೆ, ಸಾರಿಗೆ ಸೌಲಭ್ಯ, ಬ್ರಿಡ್ಜ್ ಕೋರ್ಸ್, ಆಶಾಕಿರಣ ವಸತಿ ಕೇಂದ್ರ, ಸಂಚಾರಿ ಶಾಲೆ ಇತ್ಯಾದಿ ಕಾರ್ಯತಂತ್ರಗಳು ಕ್ರಮವಾಗಿ ವಲಸೆಯ ಮಕ್ಕಳನ್ನು, ಶಾಲೆಯಿಂದ ದೂರವಿರುವ ಜನವಸತಿಯಲ್ಲಿರುವ ಮಕ್ಕಳನ್ನು, ವಲಸೆ ಹಾಗೂ ಇತರೆ ಕಾರಣಕ್ಕಾಗಿ ಶಾಲೆಯ ವ್ಯವಸ್ಥೆಯಿಂದ ತಾತ್ಕಾಲಿಕವಾಗಿ ದೂರವಿರುವ ಮಕ್ಕಳನ್ನು ಹಾಗೂ ಸಮಾಜದ ಕೊನೆ ಸ್ತರದ ಅಶಕ್ತ ಮಗುವನ್ನು ಹಾಗೂ ಅನೇಕ ಜನವಸತಿಗಳಲ್ಲಿ ಚದುರಿರುವ ಮಕ್ಕಳನ್ನು ಶಾಲಾ ವಾಹಿನಿಗೆ ತರಲು ನೆರವಾಗುತ್ತಿವೆ.

ಮೇಲಿನ ಎಲ್ಲಾ ಕಾರಣ, ಕಾರ್ಯತಂತ್ರಗಳನ್ನು ಹೊರತುಪಡಿಸಿ ಪೋಷಕರ ನಿರಾಸಕ್ತಿಯಿಂದಲೋ, ಮಗುವಿಗೆ ಶಾಲೆ ಅನಾಸಕ್ತಿ ಹುಟ್ಟಿಸುವುದರಿಂದಲೋ, ಮನೆ ಕೆಲಸದ ಕಾರಣಕ್ಕೂ ಮಗು ಶಾಲೆಯಿಂದ ಹೊರಗುಳಿಯುವ ಸಂಭವ ಇವೆ. ಶಿಕ್ಷಕರು, ಇಲಾಖೆ ತಕ್ಷಣ ಎಚ್ಚೆತ್ತು ಕಾರ್ಯ ಪ್ರವೃತ್ತರಾಗಿ ಪೋಷಕರಿಗೆ ಹಾಗು ಮಗುವಿಗೆ ಜಾಗೃತಿ/ಅರಿವು ಮೂಡಿಸಿದಲ್ಲಿ ಶಾಲೆಯಿಂದ ದೂರ ಉಳಿಯುವ ಪ್ರವೃತ್ತಿಯನ್ನು ಮೊಳಕೆಯಲ್ಲಿಯೇ ಚಿವುಟಲು ಸಾಧ್ಯವಿದೆ.

ಈ ಕಾರ್ಯತಂತ್ರವೇ ವಿಶೇಷ ದಾಖಲಾತಿ ಆಂದೋಲನ, ಈಗಾಗಲೇ ಈ ಹಿಂದಿನ ವರುಷಗಳಲ್ಲಿ ಬಾ ಬಾಲೆ ಶಾಲೆಗೆ, ಬಾ ಮರಳಿ ಶಾಲೆಗೆ, ಕೂಲಿಯಿಂದ ಶಾಲೆಗೆ ಇತ್ಯಾದಿ ಕಾರ್ಯತಂತ್ರಗಳನ್ನು ಬಳಸಿ ಮಕ್ಕಳನ್ನು ಶಾಲಾ ವಾಹಿನಿಗೆ ತರುತ್ತಿದ್ದೇವೆ. ಇವೆಲ್ಲವುಗಳ ಒಟ್ಟು ಪ್ರಯತ್ನವೇ ವಿಶೇಷ ದಾಖಲಾತಿ ಆಂದೋಲನ.

## ಯಾವಾಗ/ಯಾರು ನಡೆಸಬೇಕು :

- ಪ್ರತಿ ಜುಲೈ ತಿಂಗಳ ಮೊದಲ ವಾರದಲ್ಲಿ ಈ ಕಾರ್ಯತಂತ್ರ ಜರುಗುವುದು.
- ಶಾಲೆಯ ಮುಖ್ಯ ಶಿಕ್ಷಕರು / ಶಿಕ್ಷಕರು ಎಸ್.ಡಿ.ಎಂ.ಸಿ, ಸಮುದಾಯ, ಸ್ಥಳೀಯ ಸಂಸ್ಥೆ ಹಾಗೂ ಜನ ಪ್ರತಿನಿಧಿಗಳ ಸಹಕಾರದಿಂದ ಮೇ/ ಜೂನ್‌ನಲ್ಲಿ ನಡೆದ ದಾಖಲಾತಿ ಆಂದೋಲನದಲ್ಲಿಯೂ ಶಾಲೆಗೆ ಸೇರದೆ ಮಗು ಶಾಲೆಯಿಂದ ಹೊರಗುಳಿದದ್ದು ಗೊತ್ತಾದ ತಕ್ಷಣ ಹಮ್ಮಿಕೊಳ್ಳಬೇಕು. ಇದಕ್ಕಾಗಿ ಬ್ಲಾಕ್ / ಜನವಸತಿ ಮಟ್ಟದಲ್ಲಿ ಸಭೆ/ ಜಾಥಾ/ ಮನೆ – ಮನೆ ಭೇಟಿಗಳನ್ನು ನಡೆಸಬಹುದು. ಮನೆ ಭೇಟಿಯನ್ನು ವಿವಿಧ ಇಲಾಖೆ ಅಧಿಕಾರಿ/ ಎನ್.ಜಿ.ಓ./ ಸಮುದಾಯ ಮುಖಂಡರು / ಜನ ಪ್ರತಿನಿಧಿಗಳ ತಂಡದಲ್ಲಿ ನೀಡಬೇಕು.
- ಇದೊಂದು ನಿರಂತರ ಕಾರ್ಯಕ್ರಮ. ಪ್ರತಿ ಸೋಮವಾರ ಇದಕ್ಕಾಗಿ ವಿಶೇಷ ಕಾರ್ಯಕ್ರಮ ರೂಪಿಸಿ ಶಾಲಾ ಅವಧಿಗೆ ಮುಂಚೆ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕು. ಇದನ್ನು ಕೂಡಾ ತಂಡದಲ್ಲಿ ನಡೆಸಬೇಕು. ವಿವರವನ್ನು ದಾಖಲಿಸಬೇಕು ಈಚೆಗೆ ಮಿಂಚಿನ ಸಂಚಾರ ಕೈಗೊಳ್ಳಲಾಗುತ್ತಿದೆ. ಇದೂ ಕೂಡ ವಿಶೇಷ ದಾಖಲಾತಿ ಆಂದೋಲನದ ವಿಸ್ತೃತ ರೂಪವೇ ಆಗಿದೆ. ಯಾವ ಕಾರ್ಯತಂತ್ರದಿಂದಲೂ ಮಗುವನ್ನು ಶಾಲೆಗೆ ತರಲು ಸಾಧ್ಯವಾಗದಿದ್ದಾಗ ಅಧ್ಯಾಪಕರು ತಮ್ಮ ಮೇಲಾಧಿಕಾರಿಗಳ ಗಮನ ಸೆಳೆಯಬೇಕು.
- ವಿಶೇಷ ಸಂದರ್ಭಗಳಲ್ಲಿ ಮಕ್ಕಳೊಂದಿಗೆ ಜಾಥಾ ಕಾರ್ಯಕ್ರಮ ನಡೆಸಬಹುದಾದರೂ ಮನೆ ಭೇಟಿಗೆ ಮಕ್ಕಳನ್ನು ಬಳಸಿಕೊಳ್ಳಬಾರದು.

- ಕ್ಲಸ್ಟರ್ ಹಂತ ಹಾಗೂ ತಾಲ್ಲೂಕು ಹಂತದಲ್ಲಿ ಸಿ.ಎ.ಇ.ಓ., ಸಿ.ಆರ್.ಪಿ., ಬಿ.ಆರ್.ಸಿ.ಗಳು ಅರಿವಿನ ಕಾರ್ಯಕ್ರಮಗಳನ್ನು ಜನ ಪ್ರತಿನಿಧಿಗಳ, ಎನ್.ಜಿ.ಓ.ಗಳು ಸ್ಥಳೀಯರ ನೆರವಿನೊಂದಿಗೆ ಹಮ್ಮಿಕೊಳ್ಳಬೇಕು.
- ಸ್ಥಳೀಯ ದಿನ ಪತ್ರಿಕೆಗಳಲ್ಲಿ, ವ್ಯಾಪಕ ಪ್ರಚಾರ ನೀಡಬೇಕು.
- ಪ್ರಮುಖ ಸ್ಥಳಗಳಲ್ಲಿ ಭಿತ್ತಿ ಪತ್ರಗಳನ್ನು ಅಂಟಿಸಬೇಕು.
- ಇದಕ್ಕಾಗಿ ಪ್ರತಿ ಬ್ಲಾಕ್‌ಗಳಿಗೆ ರೂ. 5000/- ಗಳ ಅನುದಾನವನ್ನು ಸಭೆ / ಕರಪತ್ರ ಮುದ್ರಣ / ಭಿತ್ತಿ ಪತ್ರ ಮುದ್ರಣಗಳಿಗೆ ಹಾಗು ಇತರ ಸಾಮ್ಯ ಚಟುವಟಿಕೆಗಳಿಗೆ ಈ ಹಣವನ್ನು ಬಳಸಲು 05-06 ಮತ್ತು ಆ ಹಿಂದಿನ ವರ್ಷಗಳಲ್ಲಿ ನೀಡಲಾಗುತ್ತಿತ್ತು. 06-07 ರಿಂದ 09-10 ರವರೆಗೆ ಇದಕ್ಕೆ ಅವಕಾಶ ಕಲ್ಪಿಸಿಲ್ಲ.

**ಹೇಗೆ ನಡೆಸಬಹುದು ?**

- ಜಿಲ್ಲಾ ಹಂತದಲ್ಲಿ ಮಾಧ್ಯಮಗಳ ಮೂಲಕ ಅರಿವನ್ನುಂಟು ಮಾಡಬಹುದು, ಜಿಲ್ಲಾ ಮಟ್ಟದ ಅಧಿಕಾರಿಗಳು, ಜನ ಪ್ರತಿನಿಧಿಗಳ ಸಹಕಾರ ಪಡೆದುಕೊಳ್ಳುವುದು.
- ತಾಲ್ಲೂಕು, ಹೋಬಳಿ, ಶಾಲಾ ಹಂತದಲ್ಲಿ ಸ್ಥಳೀಯ ಜನ ಪ್ರತಿನಿಧಿಗಳು, ಶಿಕ್ಷಣಾಸಕ್ತರು, ಎಸ್.ಡಿ.ಎಂ.ಸಿಯವರು, ಸರ್ಕಾರಿ ನೌಕರರು ಸೇರಿ ಜಾಗೃತಿ ಆಂದೋಲನವನ್ನು ಹಮ್ಮಿಕೊಳ್ಳುವುದು.
- ಸಮೂಹ ಮಾಧ್ಯಮಗಳಲ್ಲಿ ಪ್ರಕಟಣೆ ನೀಡುವುದು
- ಶಿಕ್ಷಕರು ಮತ್ತು ಜನಪ್ರತಿನಿಧಿ / ಎಸ್.ಡಿ.ಎಂ.ಸಿ. ಯವರನ್ನೊಳಗೊಂಡ ತಂಡಗಳು ಶಾಲೆಯಿಂದ ಹೊರಗುಳಿದವರ ಮನೆಗಳಿಗೆ ಹೋಗಿ ಮಗುವನ್ನು ಕರೆತರುವುದು.
- ಇಂತಹ ಮಕ್ಕಳು ಶಾಲೆಗೆ ಸೇರಿದಲ್ಲಿ ಅವರು ಶಾಲೆ ಬಿಡದಂತೆ ಮಕ್ಕಳ / ಪೋಷಕರಿಗೆ ಆಗಾಗ್ಗೆ ಮಾರ್ಗದರ್ಶನ ನೀಡುವುದು.
- ಪ್ರಸ್ತುತ ಆಂದೋಲನದ ನಂತರವೂ ಶಾಲೆಗೆ ಗೈರುಹಾಜರಾಗುವ ಮಕ್ಕಳ ಮನೆಗೆ ಪ್ರತಿ ಸೋಮವಾರ ಶಾಲೆ ಅವಧಿಗೆ ಮುನ್ನ ಅಥವಾ ನಂತರ ಮೇಲೆ ತಿಳಿಸಿದ ತಂಡ ಭೇಟಿ ನೀಡಿ ಮಗುವನ್ನು ಕರೆತರುವುದು.
- ಗೈರುಹಾಜರಾಗುವ ಮಗುವಿನ ಮನೆಯ ಸಮೀಪದ ತಾಯಂದಿರಿಗೆ ಈ ಜವಾಬ್ದಾರಿಯನ್ನು ನೀಡಿ ಮಗು ಶಾಲೆಗೆ ಬರುವಂತೆ ಮಾಡುವುದು, ಇದನ್ನು ನೆರೆಹೊರೆ ತಾಯಂದಿರು ಎಂಬ ಕಲ್ಪನೆಯಡಿ NPEGEL ಬ್ಲಾಕ್‌ಗಳಲ್ಲಿ ಜಾರಿಗೊಳಿಸಲಾಗುತ್ತಿದೆ. ಇತರ ಬ್ಲಾಕ್‌ನಲ್ಲಿ ಇಂತಹ ತಂಡ ರಚಿಸುವುದು.
- ಹಾಜರಾತಿಯ ಮಟ್ಟವನ್ನು ಸೂಚಿಸುವ ಬಾವುಟಗಳನ್ನು ಚಿತ್ರದುರ್ಗ ತಾಲ್ಲೂಕಿನ ಹಂಪಯ್ಯ ಮಟ್ಟಿಗೆ ಎ.ಕೆ. ಕಾಲೋನಿಯಲ್ಲಿ ಕಟ್ಟಿದ್ದಾರೆ. ಮಕ್ಕಳು ಸ್ವಯಂ ಪ್ರೇರಿತರಾಗಿ ಗೈರುಹಾಜರ ಮಕ್ಕಳನ್ನು ಕರೆತಂದು ತಮ್ಮ ತರಗತಿ ಬಾವುಟ, ಹಸಿರು ಬಣ್ಣ ಹೊಂದಿರಲು ಶ್ರಮಿಸುತ್ತಾರೆ ಎಂದು ಅಧ್ಯಾಪಕರು ತಿಳಿಸಿರುತ್ತಾರೆ. ರಾಜ್ಯದ ವಿವಿದೆಡೆ ಇಂತಹ ಕಾರ್ಯಕ್ರಮ / ಪ್ರಯತ್ನ ನಡೆಯುತ್ತಿವೆ.
- ಎಲ್ಲಾ ಕಾರ್ಯತಂತ್ರಗಳಿಗಿಂತ ಈ ಕಾರ್ಯತಂತ್ರವು ಪ್ರಬಲ ಹಾಗೂ ಆಕರ್ಷಣೀಯವಾಗಿದ್ದು, ಶಿಕ್ಷಕರು ಹಾಗೂ ಅಧಿಕಾರಿಗಳು ಮಗು ಶಾಲೆ ಬಿಟ್ಟ ತಕ್ಷಣ ಕಾರ್ಯ ಪ್ರವೃತ್ತರಾದಲ್ಲಿ ಮಕ್ಕಳು ಶಾಲೆ ಬಿಡುವ, ಪೋಷಕರು ತಮ್ಮ ಮಕ್ಕಳನ್ನು ಶಾಲೆ ಬಿಡಿಸುವ ಪದ್ಧತಿಗೇ ವಿದಾಯ ಹೇಳಬಹುದು. ಸ್ವಯಂ ಪ್ರೇರಿತರಾಗಿ, ಸ್ವ ಆಸಕ್ತಿಯಿಂದ ಈ ಕಾರ್ಯದಲ್ಲಿ ಎಲ್ಲರೂ ತೊಡಗಿದಾಗ ಮಾತ್ರ ಶಿಕ್ಷಣ ಕ್ಷೇತ್ರದಲ್ಲಿ ಕ್ಷಿಪ್ರ ಬದಲಾವಣೆ ಸಾಧ್ಯ !
- ನಿರಂತರವಾಗಿ ಹಾಜರಾಗುತ್ತಿರುವ ಮಕ್ಕಳು, ತಾವು ಶಾಲೆಗೆ ಬರುವಾಗ ಗೈರುಹಾಜರಾಗುವ ಮಕ್ಕಳನ್ನು ಜೊತೆಯಲ್ಲಿ ಕರೆದುಕೊಂಡು ಬರುವಂತೆ ಮನವೊಲಿಸುವುದು.

* * * * *